ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

## ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಕಾರಿಪುರ

## ಉದ್ಯೋಗ ಭರವಸಾ ಕೋಶ ಮತ್ತು ಶಿವಮೊಗ್ಗ ಬೆಳ್ಳಿಮಂಡಲ

## ಸಹಯೋಗದೊಂದಿಗೆ

## ಚಲನಚಿತ್ರರಂಗದಲ್ಲಿ ಉದ್ಯೋಗಾವಕಾಶಗಳ ಕುರಿತು ಮಾಹಿತಿ ಕಾರ್ಯಾಗಾರ

ದಿನಾಂಕ: 29-9-2018 ರಂದು ಕಾಲೇಜಿನ ಅಲ್ಲಮ ಸಭಾಂಗಣದಲ್ಲಿ ಉದ್ಯೋಗ ಭರವಸಾ ಕೋಶ ಮತ್ತು ಶಿವಮೊಗ್ಗ ಬೆಳ್ಳಿಮಂಡಲದ ಸಹಯೋಗದೊಂದಿಗೆಚಲನಚಿತ್ರರಂಗದಲ್ಲಿ ಉದ್ಯೋಗಾವಕಾಶಗಳ ಕುರಿತು ಮಾಹಿತಿ ಕಾರ್ಯಾಗಾರವನ್ನು ಹಮ್ಮಿ ಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಶ್ರೀ ವೈದ್ಯನಟ, ಹಿರಿಯ ಪತ್ರಕರ್ತರು, ಬೆಳ್ಳಿಮಂಡಲದ ಜಿಲ್ಲಾ ಸಂಚಾಲಕರು, ತಮ್ಮ ಉದ್ಘಾಟನಾ ನುಡಿಯಲ್ಲಿ 'ಸಿನಿಮಾ ರಂಗ ಅತ್ಯಂತ ವಿಶಾಲವಾದ ಮತ್ತು ಅತೀ ಹೆಚ್ಚು ಮಾನವ ಸಂಪನ್ಮೂಲವನ್ನು ನೀರೀಕ್ಷಿಸುವ ರಂಗವಾಗಿದ್ದು, ಆಸಕ್ತರನ್ನು ಅತ್ಯಂತ ಪ್ರೀತಿಯಿಂದ ಒಪ್ಪಿಕೊಳ್ಳುತ್ತದೆ. ಅಂತಹ ಕ್ಷೇತ್ರದಲ್ಲಿ ದುಡಿಯುವ ಹಲವರು ಬೆಳಕಿಗೆ ಬರುವುದು ಕಡಿಮೆ. ಅವರನ್ನು ಗುರುತಿಸಬೇಕೆಂದರೆ ಚಲನಚಿತ್ರವನ್ನು ಕೊನೆಯವರೆಗೂ ನೋಡಬೇಕು ಮತ್ತು ಚಲನಚಿತ್ರದ ಯಶಸ್ಸಿಗೆ ಕಾರಣರಾದ ತೆರೆಮರೆಯವರನ್ನೂ ಗುರುತಿಸುವಂತಾದರೆ ಅವರಿಗೆ ಗೌರವ ಸಲ್ಲಿದಂತೆ' ಎಂದರಲ್ಲದೆ, ವಿದ್ಯಾರ್ಥಿಗಳು ಚಲನಚಿತ್ರವನ್ನು ಕೇವಲ ಕಣ್ಣಿನಿಂದ ನೋಡದೆ ಬುದ್ಧಿಯಿಂದ ಓದಿಕೊಂಡಲ್ಲಿ ಆ ಕ್ಷೇತ್ರವನ್ನು ಪೂರ್ಣವಾಗಿ ಅರಿಯಲು ಸಾಧ್ಯ ಎಂದರು.

"ಚಲನಚಿತ್ರರಂಗದಲ್ಲಿ ಉದ್ಯೋಗಾವಕಾಶಗಳು" ಕುರಿತು ಮಾತನಾಡಿದ ಶ್ರೀ ಅಶೋಕ್ ಕಶ್ಯಪ್, ರಾಷ್ಟ್ರಪ್ರಶಸ್ತಿ ಪುರಸ್ಕøತ ನಿರ್ದೇಶಕರು ಮತ್ತು ಛಾಯಾಗ್ರಾಹಕರು ' ಯಾವುದೇ ಕ್ಷೇತ್ರವೂ, ಸರ್ಕಾರಿ ಅಥವಾ ಖಾಸಗಿ ಎರಡನ್ನೂ ಒಳಗೊಂಡಂತೆ, ಒಂದಷ್ಟು ವಿದ್ಯಾರ್ಹತೆಯನ್ನು ನೀರೀಕ್ಷಿಸುತ್ತದೆ. ಒಂದಷ್ಟು ನಿಗದಿತ ಕೌಶಲ್ಯಗಳನ್ನು ನೀರೀಕ್ಷಿಸುತ್ತದೆ. ಆದರೆ ಚಲನಚಿತ್ರರಂಗ ಇಂತಹ ಯಾವುದೇ ವಿದ್ಯಾರ್ಹತೆಯನ್ನಾಗಲೀ ನಿಗದಿಪಡಿಸಿಕೊಂಡಿಲ್ಲ. ಆದ್ದರಿಂದ ಯಾವುದೇ ಶೈಕ್ಷಣಿಕ ಅರ್ಹತೆಯಿರುವವರು ಇಲ್ಲಿ ಉದ್ಯೋಗ ಹೊಂದಲು ಸಾಧ್ಯ' ಎಂದರು. ಅತ್ಯಂತ ವಿಶಾಲವಾದ ಸಿನಿಮಾ ರಂಗ ಕೆಲವೇ ಕೆಲವು ತಾಂತ್ರಿಕ ವಿಭಾಗಗಳನ್ನು ಹೊರತುಪಡಿಸಿ, ಅತೀ ತಳಮಟ್ಟದ ಸಹಾಯಕ ಹುದ್ದೆಯಿಂದ ಮೇಲ್ಮಟ್ಟದ ನಿರ್ದೇಶಕ, ನಿರ್ಮಾಪಕ,ನಟ/ನಟಿಯರ ಹುದ್ದೆಗಳೂ ಸಹ ವಿದ್ಯಾರ್ಹತೆಯನ್ನು ಪರಿಗಣಿಸದಿರುವುದರಿಂದ ನಪಾಸಾದ ಅಥವಾ ಕನಿಷ್ಠ ಅಂಕಗಳನ್ನು ಪಡೆದವರೂ ಈ ಕ್ಷೇತ್ರದಲ್ಲಿ ತಮ್ಮ ಭವಿಷ್ಯ ರೂಪಿಸಿಕೊಳ್ಳಬಹುದೆಂಬುದರೊಂದಿಗೆ, ಹಲವು ಉಪಯುಕ್ತ ಮಾಹಿತಿ ನೀಡಿದರು.

ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಶ್ರೀ ಬಿ.ಎಸ್. ಲಿಂಗದೇವರು, ರಾಷ್ಟ್ರಪ್ರಶಸ್ತಿ ಪುರಸ್ಕøತ ಚಲನಚಿತ್ರ ನಿರ್ದೇಶಕರು' ಚಲನಚಿತ್ರರಂಗ ಇಂದು ಕೇವಲ ಒಂದು ಮನರಂಜನಾ ಕ್ಷೇತ್ರವಾಗಿ ಉಳಿದಿಲ್ಲದೆ ಒಂದು ಬೃಹತ್ ಉದ್ಯಮವಾಗಿ ಬೆಳೆದಿದೆ. ಎಲ್ಲಿಯೂ ಸಲ್ಲದಿದ್ದರೂ, ಆಸಕ್ತಿ ಶ್ರದ್ಧೆ ಇದ್ದಲ್ಲಿ ಇಲ್ಲಿ ಗೆಲ್ಲಬಹುದು ಎಂಬುದಕ್ಕೆ ತಮ್ಮ ಉದಾಹರಣೆ ನೀಡಿದರಲ್ಲದೆ, ತಮ್ಮೊಂದಿಗೆ ಕೇವಲ ಸಹಾಯಕರಾಗಿ ಕೈಕಟ್ಟಿ ದೂರ ನಿಲ್ಲುತ್ತಿದ್ದವರೂ ಕೂಡ ಇಂದು ಎತ್ತರಕ್ಕೆ ಬೆಳೆದ ಬಗೆಯನ್ನ ವಿವರಿಸಿದರು. ಸಿನಿಮಾರಂಗದಲ್ಲಿ ನಟಿಯರನ್ನು ಹೊರತು ಪಡಿಸಿ ಇನ್ನಾವುದೇ ವಿಷಯದಲ್ಲಿಯೂ ಮಹಿಳೆಯರ ಭಾಗವಹಿಸುವಿಕೆ ಅತ್ಯಂತ ಕಡಿಮೆ ಇದ್ದು, ಇಂದಿನ ಯುವತಿಯರು ತಮ್ಮ ಕೀಳರಿಮೆಯನ್ನು, ಸಂಕೋಚ ಸ್ವಭಾವವನ್ನು ಬಿಟ್ಟು ಇಂತಹ ಹೊಸ ಬಗೆಯ ಉದ್ಯೋಗಗಳಲ್ಲಿ ತೊಡಗಿಕೊಳ್ಳುವ ಸಾಹಸಕ್ಕೆ ಮುಂದಾಗಬೇಕೆಂದು ಕರೆ ಇತ್ತರು.

ಅಧ್ಯಕ್ಷೀಯ ನುಡಿಗಳನ್ನಾಡಿದ ಪ್ರಾಂಶುಪಾಲರಾದ ಡಾ. ಜಿ.ಆರ್. ಹೆಗಡೆ ವಿದ್ಯಾರ್ಥಿ ಜೀವನದಲ್ಲಿ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆ, ಎನ್.ಎಸ್.ಎಸ್. ನಂತಹ ವೇದಿಕೆಗಳಲ್ಲಿ ತೊಡಗಿಸಿಕೊಳ್ಳುವಿಕೆಯು ಜೀವನ ಕಟ್ಟಿಕೊಳ್ಳಲು ಬೇಕಾದ ವಿವಿಧ ಕೌಶಲ್ಯಗಳನ್ನು ದೊರಕಿಸಿಕೊಡುವುದರಿಂದ, ವಿದ್ಯಾರ್ಥಿಗಳು ತಮ್ಮನ್ನು ತೊಡಗಿಸಿಕೊಳ್ಳುವ ಮತ್ತು ಭವಿಷ್ಯ ರೂಪಿಸಿಕೊಳ್ಳುವ ಬಗ್ಗೆ ಹಲವು ಉಪಾಯಗಳನ್ನು ಸೂಚಿಸಿದರು.

ಶ್ರೀ ಶಿವರುದ್ರಪ್ಪ, ಐಕ್ಯೂಎಸಿ ಸಂಚಾಲಕರು, ಮಾತನಾಡಿ ಇಂತಹ ಕಾರ್ಯಕ್ರಮಗಳು ನ್ಯಾಕ್‌ನಿಂದ ಉತ್ತಮ ಫಲಿತಾಂಶ ದೊರೆಯಲು ಅನುಕೂಲವಾಗುವುದರಿಂದ ಕಾಲೇಜಿನ ಸಂಪೂರ್ಣ ಸಹಕಾರವಿದೆ ಎಂದರು. ಕಾಲೇಜಿನ ಉದ್ಯೋಗ ಭರವಸಾ ಕೋಶದ ಸಂಚಾಲಕಿಯಾದ ಡಾ. ಮಂಜುಳ ಟಿ ಯವರು ಪ್ರಾಸ್ತಾಪಿಸಿ, ಡಾ. ನೇತ್ರಾವತಿಯವರು ಸ್ವಾಗತಿಸಿ, ಚಂದನ ವಂದಿಸಿದ ಕಾರ್ಯಕ್ರಮವನ್ನು ರಶ್ಮಿ ನಿರೂಪಿಸಿದರು. ಬೋಧಕ ಮತ್ತು ಬೋಧಕೇತರರ ನೆರವಿನಿಂದ ಕಾರ್ಯಕ್ರಮ ಯಶಸ್ವಿಗೊಂಡಿತು.